

ಪುಟಾಣಿ ಟ್ಯಾಂಕ್



ಪುಟ್ಟ ರೂಬಿಕ್ ಕ್ಯೂಬ್ ಶಿಲ್ಪ

ಪ್ರತಿಮೆ ಇರುವ ಸ್ಥಳದಿಂದ ಬುಡಾಪೆಸ್ಟ್ ನಗರ, ಡಾನೂಬ್ ನದಿ, ಹಂಗೇರಿ ಸಂಸತ್ ಭವನ ಮತ್ತು ಇತರ ಪ್ರಮುಖ ಸ್ಥಳಗಳ ಭವ್ಯ ದೃಶ್ಯಾವಳಿಯನ್ನು ಕಾಣಬಹುದು. ಹಾಗಾಗಿ ಇದು ಪ್ರವಾಸಿಗರಿಗೆ ಪ್ರಿಯವಾದ ಸ್ಥಳ.

**ರಾಜಕುಮಾರಿಯ ಶಿಲ್ಪ:** ಬುಡಾಪೆಸ್ಟ್‌ನ ಬುಡಾ ಕ್ಯಾಸಲ್ ಸಮೀಪ, ಡಾನೂಬ್ ನದಿಯ ದಡದ ಕಬ್ಬಿಣದ ಬೇಲಿಯ ಪೈಪ್ ಮೇಲೆ ಪುಟ್ಟ ಹುಡುಗಿ ಕುಳಿತಂತೆ ಇರುವ ಈ ಶಿಲ್ಪ ಪ್ರವಾಸಿಗರಿಗೆ ಅಚ್ಚುಮೆಚ್ಚು. ಇದರ ಶಿಲ್ಪಿ ಲಾಸ್ಲೋ ಮಾರ್ಟನ್, ತಮ್ಮ ಮಗಳು ರಾಜಕುಮಾರಿಯಂತೆ, ಪೇಪರ್‌ನಿಂದ ತಯಾರಿಸಿದ ಕಿರೀಟವನ್ನು ಧರಿಸಿ ಆಟವಾಡುತ್ತಿರುವ ದೃಶ್ಯದಿಂದ ಪ್ರೇರಣೆ ಪಡೆದು ಇದನ್ನು ರೂಪಿಸಿದರು.

**ಅನಾಮಿಕನ ಶಿಲ್ಪ:** ಬುಡಾಪೆಸ್ಟ್‌ನ ಸಿಟಿ ಪಾರ್ಕ್‌ನಲ್ಲಿರುವ ಈ ಶಿಲ್ಪ ಅನಾಮಧೇಯ ಐತಿಹಾಸಿಕ ವ್ಯಕ್ತಿಗಳ ಕೊಡುಗೆಯ ಸಂಕೇತವಾಗಿದೆ. ಈ ಶಿಲ್ಪವನ್ನು 1903ರಲ್ಲಿ ಹಂಗೇರಿಯನ್ ಶಿಲ್ಪಿ ಮಿಕ್ಲೋಸ್ ಲಿಗೇಟಿ ನಿರ್ಮಿಸಿರುವರು. ಮುಖವಾಡ ಧರಿಸಿರುವ, ಅನಾಮಿಕ ವ್ಯಕ್ತಿಯು ಕೈಯಲ್ಲಿ ಲೇಖನಿಯನ್ನು ಹಿಡಿದು ಕುಳಿತುಕೊಂಡಿರುವ ಶೈಲಿಯಲ್ಲಿ ಇದು ರೂಪುಗೊಂಡಿದೆ.

ಹಂಗೇರಿಯ 12ನೇ ಶತಮಾನದ ರಾಜ ಮೂರನೇ ಬೇಲಾ ಅವರ ಆಸ್ಥಾನದಲ್ಲಿ ಅನಾಮಧೇಯ ಚರಿತ್ರಕಾರನಿದ್ದ. ಆತ ಹಂಗೇರಿಯ ಇತಿಹಾಸ ಗ್ರಂಥವನ್ನು ರಚಿಸಿರುವನು. ಅವನ ಹೆಸರು ಅಥವಾ ವ್ಯಕ್ತಿತ್ವ ಇನ್ನೂ ತಿಳಿಯಲಾಗಿಲ್ಲ. ಅವನಂತೆಯೇ ಅನಾಮಿಕರಾಗಿ ದೇಶಕ್ಕೆ ಕೊಡುಗೆ ನೀಡಿದವರನ್ನು ಪ್ರತಿನಿಧಿಸುತ್ತದೆ ಈ ಶಿಲ್ಪ. ಈ ಶಿಲ್ಪದ ಲೇಖನಿ ಸ್ಪರ್ಶಿಸಿದರೆ ಬರಹಗಾರರಿಗೆ ಮತ್ತು ವಿದ್ಯಾರ್ಥಿಗಳಿಗೆ ಸ್ಫೂರ್ತಿ, ಪ್ರೇರಣೆ ಸಿಗುತ್ತದೆ ಎಂದು ಸ್ಥಳೀಯರು ನಂಬುತ್ತಾರೆ!

**ಇಂರೆ ನಾಗ್ ಶಿಲ್ಪ:** ಇಂರೆ ನಾಗ್ (Imre Nagy) ಅವರು ಹಂಗೇರಿಯ ಮಾಜಿ ಪ್ರಧಾನಮಂತ್ರಿ. 1956ರ ಹಂಗೇರಿಯನ್ ಬಂಡಾಯದ ಮುಖಂಡತ್ವ ವಹಿಸಿದ್ದರು. ಹಂಗೇರಿಯ ಸ್ವಾತಂತ್ರ್ಯ ಹೋರಾಟ ಮತ್ತು ಕಮ್ಯುನಿಸ್ಟ್ ಆಳ್ವಿಕೆಯ ಅಂತ್ಯವಾಡುವಲ್ಲಿ ಶ್ರಮಿಸಿದ ಪ್ರಮುಖ ವ್ಯಕ್ತಿ ಅವರು. ಬುಡಾಪೆಸ್ಟ್‌ನ ಪಾರ್ಲಿಮೆಂಟ್ ಭವನದ ಬಳಿ ಸೇತುವೆ ಮೇಲೆ ನಿಂತು ಹಂಗೇರಿಯ ಭವಿಷ್ಯವನ್ನು ದಿಟ್ಟಿಸುತ್ತಿರುವಂತೆ ಕಾಣುವ ಅವರ ಕಂಚಿನ ಶಿಲ್ಪವನ್ನು ನಿರ್ಮಿಸಿದ್ದಾರೆ.

**ಕ್ರೂಡಿ ಪ್ರತಿಮೆ:** ಬುಡಾಪೆಸ್ಟ್‌ನ ಡೌನ್‌ಟೌನ್ ಪ್ರದೇಶದ ಮೋಕಸ್ ಬೀದಿಯಲ್ಲಿದೆ ಕ್ರೂಡಿ ಪ್ರತಿಮೆ. ಮೇಜಿನ ಮೇಲೆ ಕುಳಿತಿರುವ ವ್ಯಕ್ತಿಯ ಈ ಪ್ರತಿಮೆಯ ಪಕ್ಕದಲ್ಲಿರುವ ಕುರ್ಚಿಯ ಮೇಲೆ ನಾವೂ ಕುಳಿತು ಫೋಟೊ ತೆಗೆಸಿಕೊಳ್ಳಬಹುದು. ಹಂಗೇರಿಯನ್ ಬರಹಗಾರ ಗ್ಯುಲಾ ಕ್ರೂಡಿ (1878–1933) ಹಂಗೇರಿಯ ಶ್ರೇಷ್ಠ ಸಾಹಿತಿಗಳಲ್ಲಿ ಒಬ್ಬರು. ಅವರು ಹಲವಾರು ಕಾದಂಬರಿಗಳು, ಸಣ್ಣ ಕಥೆಗಳು ಮತ್ತು ಲೇಖನಗಳನ್ನು ಬರೆದಿದ್ದಾರೆ.

**ಶೂಗಳ ಸ್ಮಾರಕ:** ಬುಡಾಪೆಸ್ಟ್ ನಗರದ ಪಾರ್ಲಿಮೆಂಟ್ ಭವನದ ಹತ್ತಿರ ಡಾನೂಬ್ ನದಿಯ ದಡದಲ್ಲಿರುವ ಶೂಗಳ ಸ್ಮಾರಕ, ಇತಿಹಾಸದ ಕ್ರೂರ ಘಟನೆಗಳ ಸಾಕ್ಷಿಯಾಗಿದೆ. ಎರಡನೇ ವಿಶ್ವ ಮಹಾಯುದ್ಧದ ಸಮಯದಲ್ಲಿ ಅಂದರೆ, 1944 ರಿಂದ 1945ರವರೆಗೂ ಅಧಿಕೃತ ಸೇನಾ ಪಡೆಯಲ್ಲದ, ತೀವ್ರತರ ಬಲಪಂಥೀಯ ಧೋರಣೆಯುಳ್ಳ 'ಹಂಗೇರಿಯನ್ ಆರೋ ಕ್ರಾಸ್ ಪಾರ್ಟಿ ಪಡೆ', ಬುಡಾಪೆಸ್ಟ್‌ನಲ್ಲಿದ್ದ ಇಪ್ಪತ್ತು ಸಾವಿರ ಯಹೂದಿಗಳನ್ನು ಈ ಡಾನೂಬ್ ನದಿಯ ದಂಡೆಯ ಮೇಲೆ ನಿಲ್ಲಿಸಿ, ಗುಂಡಿಟ್ಟು ಹತ್ಯೆ ಮಾಡಿದರು.

ಸಾಯುವ ಮುನ್ನ ಅವರು ತಮ್ಮ ಶೂ ಕಳಚಿ ನದಿಯ ದಡದಲ್ಲಿರಿಸಬೇಕಿತ್ತು. ಆಗಿನ ಯುದ್ಧಕಾಲದಲ್ಲಿ ಶೂಗಳು ಬೇಡಿಕೆಯ ದುಬಾರಿ ವಸ್ತುಗಳಾಗಿದ್ದವು. ಈ ಹತ್ಯಾಕಾಂಡದಲ್ಲಿ ಜೀವ ಕಳೆದುಕೊಂಡವರಿಗೆ ಚಲನಚಿತ್ರ ನಿರ್ದೇಶಕ ಕ್ಯಾನ್ ಟೋಗೆ, ಶಿಲ್ಪಿ ಗ್ಯುಲಾ ಪಾಯರ್ ನೆರವಿನೊಂದಿಗೆ 16 ಏಪ್ರಿಲ್, 2005ರಂದು ಕಂಚಿನ ಶೂಗಳ ಸ್ಮಾರಕವನ್ನು ನಿರ್ಮಿಸಿದರು.

**ಕೊಲುಂಬೊ ಮತ್ತು ಅವನ ನಾಯಿಯ ಶಿಲ್ಪ:** ನಗರದ ಫಾಕ್ ಮಿಕ್ಸಾ ಬೀದಿಯಲ್ಲಿದೆ ಹಳೆಯ ಟೀವಿ ಧಾರಾವಾಹಿಯ ಪಾತ್ರಧಾರಿ, ಪತ್ತೇದಾರ ಕೊಲುಂಬೊ ಮತ್ತು ಅವನ ನಾಯಿಯ ಶಿಲ್ಪ. ಹಂಗೇರಿಯನ್ ಶಿಲ್ಪಿ ಗೇಜಾ ಡೆರ್ಷೋ ಫೆಕೆಟೆ ಈ ಪ್ರತಿಮೆಯನ್ನು 2014ರಲ್ಲಿ ರೂಪಿಸಿದರು.

**ಡೊಳ್ಳು ಹೊಟ್ಟೆಯ ಪೊಲೀಸಪ್ಪನ ಶಿಲ್ಪ:** ಸೆಂಟ್ ಸ್ಟೀಫನ್ ಬ್ಯಾಸಿಲಿಕಾ ಬಳಿಯಿದೆ ಡೊಳ್ಳು ಹೊಟ್ಟೆಯ



ಹಂಗೇರಿಯ ಮೊದಲ ರಾಜ ಸ್ಟೀಫನ್ ಪ್ರತಿಮೆ